ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫಿಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫಿಸರು ತಮಿಗೆ ಅನುಕೂಲ ವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಗೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಗೆ ಏಯಿಷ್ ಮಾಡಿ ಆಬಾ ಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫಿಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫಿಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ನೆಕ್ಷರ್ಷಗಳನುಸರಿಸಿ ತೂಕ ಮಾಡಲ್ಪಟ್ಟು ಭಾಸಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟು ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ವುತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟ್ಟ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಬಿಲ್ವಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟ್ಟ ವಂಡಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿ ದಾರನಿಗೆ 10 ದಿನಗಳು ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೊಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೀನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಕ್ಷೇರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಬಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಗೆ ಲೈಸೆನ್ಸ್.

9. ಫಾರೆಸ್ಟ್ ಇಂಚಾರ್ಜ್ ಆಫಿಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸುಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ನೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸುಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟ ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ ಕೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇಂಫಾರ್ಜ್ ಫಾರೆಸ್ಟ್ ಆಫಿಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫಿಸರೇ ಆಗಲಿ ಇವರ ಮುಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇಂಫಾರ್ಜ್ ಫಾರೆಸ್ಟ್ ಆಫಿಸರು ತಮ್ಮ ಸ್ವಂತ ಜವಾಬ್ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಪಡುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಜಮಾನ್ಯರಿ ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

ನೋಟಿಸ್.

ಮೈಸೂರು ಮುನ್ಸೀಫ್ ಕೋರ್ಟಿನಲ್ಲಿ.

1896—97ನೇ ಇಸವಿ ಸಿವಿಲ್ ಸೂಟ್ ನಂಬರು 64.

ವಾದಿಗಳು—ಹುಣಸೂರು ಟವನಿನಲ್ಲಿಯಿರುವರು,

1. ವೈಲಾಂಡಾಚಾರಿ ಮಗ ಕೂರಸಾಮಿ ಆಚಾರಿ
2. ಚವುದ್ರಿ ಮತ್ತು ಯಜಮಾನ ದಾಸಪ್ಪಾಚಾರಿ
3. ಮರಗೆಲಸದ ಮುತ್ತುಸಾಮಿ ಆಚಾರಿ
4. ಮರಗೆಲಸದ ಸುಬ್ರಾಯಾಚಾರಿ
5. ಚಿನ್ನಗೆಲಸದ ನಾಗಾಚಾರಿ
6. ಚಿನ್ನಗೆಲಸದ ದಾಸಂಣಾಚಾರಿ

7. ಚಿನ್ನಕೆಲಸದ ಲಿಂಗಣ್ಣಾಚಾರಿ
8. ಚಿನ್ನಕೆಲಸದ ವೇಲಾಯುಧಾಚಾರಿ
9. ಮರಕೆಲಸದ ವೈಯಾಪುರಿಯಾಚಾರಿ
10. ಚಿನ್ನಕೆಲಸದ ದೊಡ್ಡಸುಬ್ಬಂಣಾಚಾರಿ
11. ಹುಣಸೂರು ಟವರ್ಗೆ ಕೇರಿದ ಪುಲ್ಲುಕಾಣಿಕೆಯಲ್ಲಿರುವ ನರಸುಹ್ಮಾಚಾರಿ
12. ಡಿಟೋ ಲಕ್ಷ್ಮೀಪತಿಯಾಚಾರಿ
13. ಡಿಟೋ ಲಕ್ಷ್ಮಂಣಾಚಾರಿ
14. ಹುಣಸೂರಲ್ಲಿಯಿರುವ ಮರಗೆಲಸದ ಷಣ್ಮುಖಾಚಾರಿ ವಗೈರೆ

ಪ್ರತಿವಾದಿಗಳು—ಹುಣಸೂರಲ್ಲಿಯಿರುವವರು,

1. ರಾಮಾಸ್ವಾಮಿ ಆಚಾರಿ ಮಗ ಕುಳ್ಳಾಚಾರಿ
2. ಚಿನ್ನಕೆಲಸದ ಶೇಷಾಚಾರಿ
3. ಚಿನ್ನಕೆಲಸದ ಡಿಟೋ ನರಸಾಚಾರಿ
4. ಬಿಳಿಕೆರೆನಂಜಪ್ಪಾಚಾರಿ
5. ನಾರಾಯಣಸ್ವಾಮಿ ಆಚಾರಿ
6. ಡಿಟೋ ಕಂಚುಗಾರ ಅಮಯ್ಯಪ್ಪಾಚಾರಿ
7. ಡಿಟೋ ಮರಕೆಲಸದ ಕಾಳಪ್ಪಾಚಾರಿ ವಗೈರೆ

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷರ್ಷ ಮೇರೆ ಹುಣಸೂರು ಟವನಿನಲ್ಲಿ ಯಿರುವ ಸಮಸ್ತ ಜನಗಳಿಗೂ ತಿಳಿಯುಪಡಿಸುವದೇನಂದರೆ,—

ಮೇಲ್ಕಂಡ ಮೊಕದ್ದಮೆಯಲ್ಲಿನ ವಾದಿಯಾದವರು, ಈ ಮೊಕದ್ದಮಾವನ್ನು ತಮ್ಮ ಪರವಾಗಿಯೂ ಮತ್ತು ತಮ್ಮ ಜಾತಿ ಇತರ ಜನಗಳ ಪರವಾಗಿಯೂ ದಾವಾ ದಾಖಲ್ಮಾಡಲು ಕೋರ್ಟಿನವರ ಅಪ್ಪಣೆಯನ್ನು ಪ್ರಾರ್ಥಿಸಿದ್ದಾರೆಂದುನ್ನೂ 1—2ನೇ ವಾದೀರು ಈ ಛತ್ರದ ಸುಫರ್ದನ್ನು ಹೊಂದಲು, ಮತ್ತು ಈ ಛತ್ರಕ್ಕೆ ಬೀಗಹಾಕುವದು ತೆಗಿಯುವದು ವಗೈರೆಯನ್ನು ಈ ಛತ್ರದ ಇತರ ಆಡಳಿತಗಳನ್ನ ನಡಿಸಲು, ಹಕ್ಕುದಾರರೆಂತ್ತ ಹಕ್ಕು ಸ್ಥಾಪಿಸಿ ಪ್ರತಿವಾದೀರಿಂದ ಛತ್ರವನ್ನು ವಾದೀರ ಸುಫರ್ದಿಗೆ ಕೊಡಿಸಬೇಕೆಂತಲೂ ಮತ್ತು ಪ್ರತಿವಾದೀರೆಲ್ಲರೂ ಸಹ 1—2ನೇ ವಾದೀರ ಅನುಭವದಲ್ಲಿ ಹತ್ತು ಜನರಂತೆ ವುಪಾಕರ್ಮ, ಶಿವರಾತ್ರಿ, ಭಜನೆ, ಜಾತಿ ಪಂಚಾಯಿತಿ ವಗೈರೇ ಎಲ್ಲಾ ಕೆಲಸಗಳಿಗೂ ಸಹ ಈ ಛತ್ರಕ್ಕೆ ಪ್ರವೇಶಿಸಿ ಈ ಛತ್ರವನ್ನು ವುಪಯೋಗಿಸಬಹುದೆಂತ್ತಲೂ ಮತ್ತು ಮೈಸೂರು ಟವ್ನ ಮೇಜಿಸ್ಟ್ರೇಟರವರು ಮಾಡಿದ 1894—95ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ 232ನೇ ನಂಬರು ಆರ್ಡರನ್ನು ರದ್ದುಪಡಿಸಿ ಹಾಲಿ ಪ್ರತಿವಾದೀರು, ವಾದೀರು ಛತ್ರಕ್ಕೆ ಪ್ರವೇಶಿಸಿ ಛತ್ರವನ್ನು ವುಪಯೋಗಿಸಲು ಇರುವ ಪ್ರತಿಬಂಧಕವನ್ನು ತಪ್ಪಿಸಬೇಕೆಂತಲೂ,

B. ಹಾಗೆ ವಾದೀರೊಬ್ಬರೇ ಸುಫರ್ದು ಹೊಂದಲು ಅಥವಾ 1—2ನೇ ವಾದೀರಲ್ಲಿ ಪ್ರವೇಶಿಸಬೇಕೆಂತ ಡಿಕ್ರಿಕೊಡಲು ಆಗುವ ವಿಲ್ಲವೆಂತ ಒಂದು ವೇಳೆ ಕೋರ್ಟಿನವರಿಗೆ ತೋರಿಬಂದಲ್ಲಿ ಪ್ರತಿವಾದೀರಂತೆ ವಾದೀರಿಗೂ ಈ ಛತ್ರದ ಜಂಟಿ ಸುಫರ್ದನ್ನು ಕೊಡಿಸಬೇಕೆಂತ್ತಲೂ,

C. ಈ ಮೊಕದ್ದಮಾ ಕೋರ್ಟ್ ಖರ್ಚು ಮತ್ತು ಕೋರ್ಟಿನವರಿಗೆ ದುಕ್ತತೋರುವ ಇನ್ನೂ ಇತರ ಪರಿಹಾರಗಳಿಗೂ ಸಹ ದಾವಾ ದಾಖಲ್ಮಾಡಿರುತ್ತಾರೆಂದುನ್ನೂ ಸದರ್ ಮೊಕದ್ದಮಾ 1896ನೇ ಇಸವಿ ಅಕ್ಟೋಬರು 29ನೇ ತಾರೀಖಿಗೆ ಯಿಷ್ಯೂಬಗ್ಗೆ ಹಿಯರಿಂಗು ಯಿಟ್ಟು ಇರುವದರಿಂದ ಈ ಮೊಕದ್ದಮಾಕ್ಕೆ ಕಕ್ಷಿಗಾರನಾಗಿ ಶೇರಬೇಕೆಂದು ಯಿರುವ ಸಮಸ್ತ ಜನಗಳೂ ಈ ಕೋರ್ಟ್ ರೂಬರೂ ಮೇಲ್ಕಂಡ ತಾರೀಖಿಗೆ ಹಾಜರಾಗತಕ್ಕದ್ದೆಂದು ಪ್ರಸಿದ್ಧಪಡಿಸಿಧೆ.

31—8—96.

ವಿ. ರಂಗಾಚಾರ್,
ಸೆಷನ್ಸ್ ಜಡ್ಜ್.

ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮೈಸೂರ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 3ನೇ ಅಕ್ಟೋಬರ್ 1896.

ಮೈಸೂರು ಡಿಸ್ಟ್ರಿಕ್ಟ್ ಇದರಲಿ ಕಂಡ ಫಾರೆಸ್ಟ್ಗಳಿಂದ ಅವುಗಳ ಬಾಜೂದಲ್ಲಿ ತೋರಿಸಲ್ಪಡುವ ಆಯಾ ಅಂಚಿಕೆಗಳಿಗೆ ಸ್ಯ 1897ನೇ ಇಸವಿ ಜನವರಿ ತಾರೀಖು 15ರ ವಳಗಾಗಿ ವಣ ನಾಟಾ ಸಾಗಿಸುವದಕ್ಕೆ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.